

ವಿಭಿನ್ನವಾಗಿ ಗುರುತಿಸಿ ಹೆಸರಿಸುವುದೇನಿದ್ದರೂ ವಿಮರ್ಶಕರು. ನಾನು ಒಡಿಸ್ಸಿಯ ಪಲ್ಲವಿ ಸಂಗೀತಕ್ಕೆ ಸಮಕಾಲೀನ ನೃತ್ಯದ ಹೆಜ್ಜೆಗಳನ್ನು ಹಾಕಿ, ನೃತ್ಯ ಪರಿಕಲ್ಪನೆಯನ್ನು ವಿಭಿನ್ನವಾಗಿ ಮಾಡಬಹುದು. ಮಲೇಷ್ಯಾ, ಭಾರತ ಮತ್ತು ಏಷ್ಯಾದ ವಿವಿಧ ದೇಶಗಳಲ್ಲಿ ಸಂಚರಿಸುವ 'ಸೂತ್ರ ಫೌಂಡೇಷನ್'ನ ಪ್ರಸ್ತುತಿಗಳ ಮೂಲಕ ನಾವೀಗ ಸೌಂದರ್ಯಶಾಸ್ತ್ರವನ್ನು ಏಷ್ಯನ್ ದೃಷ್ಟಿಕೋನದಿಂದ ನೋಡಬಹುದು.

ನಾನು ಒಡಿಸ್ಸಿ ಕಲಿಕೆ ಆರಂಭಿಸಿದಾಗ ಶೈಲಿ ಮತ್ತು ಅದರ ಪೂರ್ವಾಪರದ ಬಗ್ಗೆ ಹೆಚ್ಚೇನೂ ಗಮನಹರಿಸಿದ್ದಿಲ್ಲ. ಆದರೆ, ನಿಧಾನವಾಗಿ ನನಗೆ ಇದೇ ಶೈಲಿಯತ್ತ ಆಕರ್ಷಣೆ ಹೆಚ್ಚಾಯಿತು. ಅವರದ್ದು ಹೆಚ್ಚು ಬಿರುಸಾದ ಮತ್ತು ಕಡಿಮೆ ಅನುಸಂಧಾನವನ್ನು ಹೊಂದಿರುವ ಶೈಲಿ. ಅದೇಕೋ, ಈ ಶೈಲಿ ನನಗೆ ಒಪ್ಪುವಂಥದ್ದು ಅನ್ನಿಸಿತು, ಭಾವವೂ ಗಟ್ಟಿಯಾಗಲಾರಂಭಿಸಿತು. ತ್ರಿಧಾರಾ ತತ್ತ್ವವನ್ನು ನಾನು ಸಂಪೂರ್ಣ ಒಪ್ಪುತ್ತೇನೆ. ಜನಪದ ಮತ್ತು ಬುಡಕಟ್ಟು ಸಮುದಾಯದ ಪ್ರಕಾರಗಳು ನಿರಂತರವಾಗಿ ಶಾಸ್ತ್ರೀಯ ಕಲಾಪ್ರಕಾರಕ್ಕೆ ಪ್ರೇರಣೆಯಾಗಿರುತ್ತವೆ ಮತ್ತು ಅವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಶಾಸ್ತ್ರೀಯ ಪ್ರಕಾರಗಳಿಗೆ ಅಂತಃಸ್ಸತ್ತ್ವವನ್ನು ಪೂರಣ ಮಾಡುತ್ತಿರುತ್ತವೆ. ಇದನ್ನು ಗುರುತಿಸುವುದೇ ನನ್ನ ಸಾಧನೆ ಎಂದು ನಾನು ಭಾವಿಸುವೆ. ನಾನು ನೃತ್ಯ ನಿರ್ದೇಶನ ಮಾಡಿರುವ 'ಗಂಜಾಮ್', 'ಜಯರಾಮ' ಮುಂತಾದ ಅನೇಕ ಪರಿಕಲ್ಪನೆಗಳನ್ನು ನೀವು ಗಮನಿಸಿದರೆ, ನಾನು ಈ 'ತ್ರಿಧಾರಾ ಶೈಲಿ'ಯನ್ನು ಅನುಸರಿಸುತ್ತಾ ಬಂದಿರುವುದನ್ನು ಕಾಣಬಹುದು.

ನಾನು ಆಸ್ಟ್ರೇಲಿಯಾದಲ್ಲಿ ಒಡಿಸ್ಸಿ ಕಲಿತಿದ್ದರೂ,